# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೇಂಟ್/ಉಪಲೋಕ್ ಎಮ್.ವೈ.ಎಸ್–9135/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 30/12/2019.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಗುಂಡ್ಲುಪೇಟೆ ತಾಲ್ಲೂಕಿನ ಕೆಲಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಪಿರ್ಯಾದುದಾರರಾದ ಶಿವಬಸವಶೆಟ್ಟಿ ಇವರ ಮನೆ ಸಾಲಿನಲ್ಲಿ ಸಾರ್ವಜನಿಕ ಸ್ಥಳವನ್ನು ಒತ್ತುವರಿ ಮಾಡಿ ಶೌಚಾಲಯ ನಿರ್ಮಿಸಿದ್ದು ಚರಂಡಿ ನಿರ್ಮಿಸುವ ಯೋಜನೆ ಅನುಷ್ಟಾನವಾಗದೆ ಇರುವುದು ಕಂಡುಬಂದಿದ್ದು ಸದರಿ ಸ್ಥಳದಲ್ಲಿ ಪಂಚಾಯಿತಿ ಯೋಜನೆಯಂತೆ ಚರಂಡಿ ನಿರ್ಮಿಸಲು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ನ್ಯಾಯೋಚಿತವಾಗಿ ಸಂಬಂಧಪಟ್ಟವರಿಗೆ ಅವಕಾಶ ಕಲ್ಪಿಸಿ ಚರಂಡಿ ನಿರ್ಮಿಸಿ ಚರಂಡಿ ನಿರ್ಮಿಸಿದ ಬಗ್ಗೆ ವರದಿ ಸಲ್ಲಿಸುವ ಕುರಿತು.

*****

1. ಶ್ರೀ ಶಿವಬಸವಶೆಟ್ಟಿ ಬಿನ್ ಸುಬ್ಬಶೆಟ್ಟಿ, ಕೆಲಸೂರು ಗ್ರಾಮ ಮತ್ತು ಅಂಚೆ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಈ ದೂರನ್ನು ಸಲ್ಲಿಸಿ, (1) ಶ್ರೀಮತಿ ಪುಷ್ಪಾ ಕಮ್ಮಾರ್, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ, (2) ಶ್ರೀ ಭೋಜೇಶ್, ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೆಲಸೂರು ಗ್ರಾಮ ಪಂಚಾಯಿತಿ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

2. ದೂರಿನ ಸಂಕ್ಷಿಪ್ತ ಸಾರಾಂಶ:

(1) ಕೆಲಸೂರು ಗ್ರಾಮದ ಪಿರ್ಯಾದುದಾರರ ಮನೆ ಮುಂದೆ ಹಾಗೂ ಮಡಿವಾಳಶೆಟ್ಟರ ಮನೆಗಳ ಮುಂಭಾಗ ರಾಚಶೆಟ್ಟಿ ಮನೆಯಿಂದ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ಮನೆಗಳ ಮುಂದೆ ಕೊಳಚೆ ನೀರು ಮುಂದೆ ಹೋಗದೆ ಕಸಕಡ್ಡಿ ತುಂಬಿಕೊಂಡು ಕ್ರಿಮಿ ಕೀಟಗಳು, ಸೊಳ್ಳೆಗಳು ಉತ್ಪತ್ತಿಯಾಗಿ ಮನೆಯಲ್ಲಿ ವಾಸ ಮಾಡಲು ತುಂಬಾ ತೊಂದರೆಯಾಗಿರುತ್ತದೆ. ಚರಂಡಿ ವ್ಯವಸ್ಥೆ ಇಲ್ಲದ ಕಾರಣ ಮಳೆಗಾಲದಲ್ಲಿ ಮಳೆಯ ನೀರು ಮನೆಯ ಒಳಗಡೆ ಹರಿದುಬರುತ್ತಿದ್ದು, ಅನೇಕ ಬಾರಿ ದೂರು ಸಲ್ಲಿಸಿದ್ದರೂ ಯಾವೊಬ್ಬ ಅಧಿಕಾರಿಯು ಗಣನೆಗೆ ತೆಗೆದುಕೊಳ್ಳದೆ ವಿಳಂಬಮಾಡಿ ಬೇಜಾವಾಬ್ದಾರಿತನದಿಂದ ನಡೆದುಕೊಳ್ಳುತ್ತಿದ್ದಾರೆ.

(2)ಗ್ರಾಮದ ಚಂದ್ರಪ್ರಭ ಬಿನ್ ಕೆ.ಪಿ. ಪದ್ಮರಾಜಯ್ಯ ಎಂಬುವವರಿಗೆ ಯಾವುದೇ ಖಾಲಿ ಜಾಗವಿಲ್ಲದಿದ್ದರೂ ಕೆಲಸೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಅಸೆಸ್‌ಮೆಂಟ್ 7 ರ ಖಾಲಿ ಜಾಗವನ್ನು ಸದರಿ ಚಂದ್ರಪ್ರಭ ರವರಿಗೆ ಖಾತೆ ಮಾಡಿಕೊಟ್ಟಿರುತ್ತಾರೆ. ಸದರಿ ಅರ್ಧ ಜಾಗವು ಗ್ರಾಮ ಪಂಚಾಯಿತಿಗೆ ಸೇರಿರುತ್ತದೆ. ಇನ್ನುಳಿದ ಜಾಗವು ಚಂದ್ರಪ್ರಭ ರವರಿಗೆ ಸೇರಿರುತ್ತದೆ.

(3) ಪಿರ್ಯಾದುದಾರರ ಮನೆಯ ಪಕ್ಕದಲ್ಲಿರುವ ಗ್ರಾಮ ಪಂಚಾಯಿತಿ ಜಾಗದಲ್ಲಿ ತಿರುಗಾಡುವ ದಾರಿ ಮತ್ತು ಚರಂಡಿಯನ್ನು ಮಾಡಿಸಿಕೊಡಬೇಕೆಂದು ವಿನಂತಿಸಿ ದೂರು ಸಲ್ಲಿಸಿರುತ್ತಾರೆ.

ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

3. 1ನೇ ಎದುರುದಾರರ ಆಕ್ಷೇಪಣೆಗಳು:-

ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಕೆಲಸೂರು ಇವರು ಸ್ಥಳ ಪರಿಶೀಲನೆಯನ್ನು ದಿನಾಂಕ: 11/09/2017 ರಂದು ಮಾಡಿದ್ದು ಪಿರ್ಯಾದುದಾರರ ನಿವೇಶನ ಹಾಗೂ ಬಾಜುದಾರರ ನಿವೇಶನಗಳ ಮಧ್ಯ 4 ಅಡಿಗಳ ಜಾಗವಿದ್ದು, ಚರಂಡಿ ನಿರ್ಮಾಣ ಮಾಡಬಹುದಾಗಿರುತ್ತದೆ. ಆದರೆ ರಾಜು ಇವರ ಮನೆ

ಪಕ್ಕ ಗಲ್ಲಿಯಲ್ಲಿ ಶೌಚಾಲಯ ನಿರ್ಮಾಣ ಮಾಡಿದ್ದು ಚರಂಡಿ ನಿರ್ಮಾಣ ಮಾಡುವ ಸ್ಥಳದಲ್ಲಿ ಶೌಚಾಲಯ ಇರುವುದರಿಂದ ಚರಂಡಿ ನಿರ್ಮಾಣ ಮಾಡಲು ಆಗುತ್ತಿಲ್ಲ. ಶೌಚಾಲಯ ತೆರವುಗೊಳಿಸಲು ಗ್ರಾಮ ಪಂಚಾಯಿತಿಯಿಂದ ನೋಟೀಸ್ ನೀಡಿ ಕ್ರಮ ಕೈಗೊಳ್ಳಲಾಗುವುದು ಎಂದು ನಮೂದಿಸಿರುತ್ತಾರೆ.

4. 2ನೇ ಎದುರುದಾರರ ಆಕ್ಷೇಪಣೆಗಳು:-

ಕೆಲಸೂರು ಹಾಗೂ ಅಣ್ಣೂರು ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಯಾಗಿದ್ದು, ಕೆಲಸದ ಒತ್ತಡದಿಂದ ನಿಗದಿತ ಸಮಯದೊಳಗಡೆ ಚರಂಡಿ ನಿರ್ಮಾಣ ಮಾಡಲು ಸಾಧ್ಯವಾಗಿರುವುದಿಲ್ಲ. ಸುಮಾರು 80 ಮೀಟರ್ ನಷ್ಟು ಉದ್ದದ ಚರಂಡಿಯನ್ನು ಮಾಡಿಸಬೇಕಾಗಿರುತ್ತದೆ. ಚರಂಡಿ ಮಾಡಿಸಬೇಕಾದ ಸ್ಥಳದಲ್ಲಿ ಕೆಲವರು ಅತಿಕ್ರಮಿಸಿ ಶೌಚಾಲಯ ನಿರ್ಮಿಸಿಕೊಂಡಿರುತ್ತಾರೆ. ದಿನಾಂಕ: 08/09/2017 ರಂದು ಸ್ಥಳವನ್ನು ಅಳತೆ ಮಾಡಿ ಅತಿಕ್ರಮಗೊಂಡಿರುವ ಕಟ್ಟಡಗಳನ್ನು ತೆರವುಗೊಳಿಸಿ, ಚರಂಡಿ ನಿರ್ಮಾಣವನ್ನು ಪ್ರಾರಂಭಿಸಿ ವರದಿ ಮಾಡುವುದಾಗಿ ನಮೂದಿಸಿರುತ್ತಾರೆ.

5. ಕಾರ್ಯದರ್ಶಿಗಳು, ಕೆಲಸೂರು ಗ್ರಾಮ ಪಂಚಾಯತಿ, ಗುಂಡ್ಲುಪೇಟೆ ತಾಲ್ಲೂಕು ರವರ ವರದಿ ದಿನಾಂಕ: 20/03/2019:

ಕೆಲಸೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಜಾಗದಲ್ಲಿ ದೂರು ಅನ್ವಯ ಚರಂಡಿ ನಿರ್ಮಾಣ ಪ್ರಾರಂಭಿಸಲು ದಿನಾಂಕ: 28/02/2019 ರಂದು ನಾವುಗಳು ಸ್ಥಳ ಮಹಜರ್ ಮಾಡಲು ಹೋದಾಗ ಪಿರ್ಯಾದುದಾರರು ಹಾಜರಿದ್ದು ಪಿರ್ಯಾದುದಾರರ ಮನೆಯಿಂದ ಪೂರ್ವ-ಪಶ್ಚಿಮ ಸುಮಾರು 175 ಅಡಿ ಚರಂಡಿ ನಿರ್ಮಿಸಬೇಕಾಗಿರುವುದರಿಂದ ಚರಂಡಿ ನಿರ್ಮಾಣ ಮಾಡುವ ಗಲ್ಲಿಯಲ್ಲಿ ರಾಜು ಎನ್ನುವವರು ತಾಯಮ್ಮರವರ ಹೆಸರಿನಲ್ಲಿ 30 X 32 ಅಡಿಯುಳ್ಳ ಮನೆ ನಿರ್ಮಿಸಿ ಅವರಿಗೆ ಸೇರಿದ 1 ಅಡಿ ಬಿಟ್ಟು ಹೆಚ್ಚಿಗೆ 2 1/2 ಅಡಿಯನ್ನು ಸೇರಿಸಿ ಒಟ್ಟು 3 ಅಡಿಯಲ್ಲಿ ಶೌಚಾಲಯವನ್ನು ನಿರ್ಮಿಸಿಕೊಂಡಿರುವುದರಿಂದ ಚರಂಡಿ ನಿರ್ಮಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಸ್ಥಳದಲ್ಲಿ ಶೌಚಾಲಯವನ್ನು ತೆರವುಗೊಳಿಸುವಂತೆ ಗ್ರಾಮ ಪಂಚಾಯತಿಯಿಂದ ನೋಟೀಸ್ ನೀಡಿದರೂ ಸಹ ತೆರವುಗೊಳಿಸದೇ ಇರುತ್ತಾರೆ, ಹಾಗೂ ಅವರ ಮನೆ ಉತ್ತರಕ್ಕೆ ಇರುವ ಜಾಗದಲ್ಲಿ ಶೌಚಾಲಯ ನಿರ್ಮಿಸಿರುತ್ತಾರೆ ಎಂದು ವರದಿ ಸಲ್ಲಿಸಿರುತ್ತಾರೆ.

6. ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಪೋಲೀಸ್, ಚಾಮರಾಜನಗರ ಇವರು ಸಲ್ಲಿಸಿರುವ ತನಿಖಾ ವರದಿ ದಿನಾಂಕ: 26/08/2019 ರ ಅಂಶಗಳು:-

ವಿವಾದಿತ ಸ್ಥಳದಲ್ಲಿ ಚರಂಡಿ ನಿರ್ಮಾಣ ಕಾಮಗಾರಿ ಮಾಡಲು ಕ್ರಿಯಾ ಯೋಜನೆಗೆ ಸೇರಿಸಿದ್ದು ಕ್ರಿಯಾ ಯೋಜನೆ ಅನುಷ್ಠಾನಗೊಂಡಿರುವುದಿಲ್ಲ. ದೂರುದಾರರು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಇವರ ಜೊತೆ ಸ್ಥಳ ಪರಿಶೀಲಿಸಿದಾಗ ಸಾಲಿನಲ್ಲಿ 05 ಮನೆಗಳಿದ್ದು, ಪಿರ್‍ಯಾದುದಾರರ ಮನೆಯ ಮುಂದೆ ಚರಂಡಿ ಇಲ್ಲದೆ ಮಳೆ ಬಂದಾಗ ನೀರು ಹೊಗುವುದಕ್ಕೆ ದಾರಿಯಿಲ್ಲದಿರುವುದು ಕಂಡುಬಂದಿರುತ್ತೆ.

2ನೇ ಎದುರುದಾರರಿಗೆ ನೊಟೀಸ್ ನೀಡಿ ವಿಚಾರಣೆ ಮಾಡಿದ್ದು ಸದರಿಯವರು ದಿನಾಂಕ: 27/06/2010 ರಿಂದ 2013 ನೇ ಸಾಲಿನವರೆಗೆ ಹಾಗೂ ದಿನಾಂಕ: 18/05/2016 ರಿಂದ 22/07/2018 ರವರೆಗೆ ಕೆಲಸೂರು ಗ್ರಾಮ ಪಂಚಾಯಿತಿಯಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಆಗಿ ಕರ್ತವ್ಯ ನಿರ್ವಹಿಸಿರುವುದಾಗಿ ಚರಂಡಿ ನಿರ್ಮಾಣ ಮಾಡಲು ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಕ್ರಿಯಾ ಯೋಜನೆಗೆ ಸೇರಿಸಲಾಗಿತ್ತು ಎಂದು ಹೇಳಿರುತ್ತಾರೆ.

ವಿಚಾರಣಾ ಕಾಲದಲ್ಲಿ ಸ್ಥಳ ಪರಿಶೀಲಿಸಲಾಗಿ ಪಿರ್‍ಯಾದುದಾರರ ಮನೆ ಸಾಲಿನಲ್ಲಿ 5 ಮನೆಗಳಿದ್ದು ಚರಂಡಿ ನಿಮಾಣ ಮಾಡುವ ಅವಶ್ಯಕತೆಯಿರುತ್ತದೆ.

2ನೇ ಎದುರುದಾರರು ಕೆಲಸೂರು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ನಿರ್ವಹಿಸುವಾಗ ಮೇಲಾಧಿಕಾರಿಗಳ ಆದೇಶ ಪಾಲನೆ ಮಾಡಿ ವಿವಾದಿತ ಸ್ಥಳದಲ್ಲಿ ಸರಿಯಾದ ಅಳತೆ ಕಾರ್ಯ ಮಾಡಿ ಚರಂಡಿ ನಿರ್ಮಾಣ ಮಾಡುವಲ್ಲಿ ವಿಫಲರಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ದೂರುದಾರರ ಮನೆ ಸಾಲಿನಲ್ಲಿರುವ ಶ್ರೀ ರಾಜು ಇವರು ತಮ್ಮ ಮನೆ ಪಕ್ಕದಲ್ಲಿ ಅಂದರೆ ದೂರುದಾರರ ಮನೆ ಸಾಲಿನಲ್ಲಿ ಒಂದು ಶೌಚಾಲಯ ನಿರ್ಮಾಣ ಮಾಡಿರುತ್ತಾರೆ. ಶೌಚಾಲಯ ನಿರ್ಮಾಣ ಮಾಡಿರುವ ಜಾಗದಲ್ಲಿ 21/2 ಅಡಿ ಒತ್ತುವರಿಯಾಗಿದ್ದು ನೋಟೀಸ್ ನೀಡಿದರು ತೆರವುಗೊಳಿಸದಿರುವುದು ಕಂಡುಬಂದಿದ್ದು ತೆರವುಗೊಳಿಸಲು ಅಗತ್ಯ ಕ್ರಮ ಜರುಗಿಸಿರುವುದಿಲ್ಲ.

2ನೇ ಎದುರುದಾರರು ಕರ್ತವ್ಯ ನಿರ್ವಹಿಸಿದ ಅವಧಿಯಲ್ಲಿ ಶ್ರೀ ಚಂದ್ರಪ್ರಭಾ ಬಿನ್ ಕೆ.ಪಿ. ಪದ್ಮರಾಜಯ್ಯ ರವರು ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದು ನಿವೇಶನ ಸ್ಥಳವನ್ನು ಸರಿಯಾದ ಕ್ರಮದಲ್ಲಿ ಅಳತೆ ಮಾಡಿಸಿ ಸದರಿ ಆಸ್ತಿ ಮಾರಾಟವಾಗಿದೆಯೆ/ಗ್ರಾಮ ಪಂಚಾಯ್ತಿಯಲ್ಲಿ ಖಾತೆ ಆಗಿದೆಯೇ ಎಂಬ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲರಾಗಿರುವುದು ಸ್ಥಳ ಪರಿಶಿಲನೆಯಿಂದ ಮತ್ತು ದಾಖಲೆಗಳ ಪರಿಶೀಲನೆಯಿಂದ ಕಂಡುಬಂದಿದೆ ಎಂದು ನಮೂದಿಸಿರುತ್ತಾರೆ.

7. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ ಹಾಗೂ ತನಿಖಾಧಿಕಾರಿಗಳು ಖುದ್ದು ಸ್ಥಳ ವೀಕ್ಷಿಸಿ ಸಂಗ್ರಹಿಸಿದ ಆಧಾರಗಳಿಂದ 2ನೇ ಎದುರುದಾರರು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾಗಿ ದಿನಾಂಕ: 27/06/2010 ರಿಂದ 2013 ಹಾಗೂ 18/05/2016 ರಿಂದ 22/07/2018 ರವರೆಗೆ ಕೆಲಸೂರು ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿರುವುದು ಕಂಡುಬಂದಿರುತ್ತದೆ.

8. ಪಿರ್ಯಾದುದಾರರ ಮನೆ ಸಾಲಿನಲ್ಲಿ 5 ಮನೆಗಳಿದ್ದು ಚರಂಡಿ ನಿರ್ಮಾಣ ಮಾಡಲು ಅಗತ್ಯ ಕ್ರಮ ಜರುಗಿಸುವಂತೆ ಮೇಲಾಧಿಕಾರಿಗಳು ಸೂಚಿಸಿದ್ದರೂ ವಿವಾದಿತ ಸ್ಥಳದಲ್ಲಿ ಅಳತೆ ಕಾರ್ಯ ಮಾಡಿ ಚರಂಡಿ ನಿರ್ಮಾಣ ಮಾಡದೆ ವಿಫಲರಾಗಿರುವುದಾಗಿ ತನಿಖಾಧಿಕಾರಿಗಳು ನಮೂದಿಸಿರುತ್ತಾರೆ.

9. ಸದರಿ ಮನೆಗಳ ಸಾಲಿನಲ್ಲಿರುವ ಶ್ರೀ ರಾಜು ಇವರು ಶೌಚಾಲಯ ನಿರ್ಮಾಣ ಮಾಡಿರುವ ಜಾಗದಲ್ಲಿ 2 1/2 ಅಡಿ ಒತ್ತುವರಿ ಮಾಡಿ ನಿರ್ಮಿಸಿದ್ದರೂ ಅಕ್ರಮ ನಿರ್ಮಾಣದ ವಿರುದ್ಧ ತೆರವುಗೊಳಿಸಲು ಅಗತ್ಯ ಕ್ರಮ ಜರುಗಿಸಿಲ್ಲವೆಂದು ತನಿಖಾಧಿಕಾರಿಗಳು ನಮೂದಿಸಿರುತ್ತಾರೆ.

10. ತನಿಖಾಧಿಕಾರಿಗಳು ಸಂಗ್ರಹಿಸಿದ ಸದರಿ ಆಧಾರಗಳಿಂದ 2ನೇ ಎದುರುದಾರರು ಪಿರ್ಯಾದುದಾರರ ಮನೆಯ ಸಾಲಿನಲ್ಲಿ ಚರಂಡಿ ನಿರ್ಮಿಸಲು ಅಗತ್ಯ ಕ್ರಮ ಜರುಗಿಸದೆ ಶ್ರೀ ರಾಜುರವರು 2 1/2 ಅಡಿ ಸಾರ್ವಜನಿಕ ಸ್ಥಳ ಒತ್ತುವರಿ ಮಾಡಿ ಶೌಚಾಲಯ ನಿರ್ಮಿಸಿದ್ದನ್ನು ತೆರವುಗೊಳಿಸಲು ಅಗತ್ಯ ಕ್ರಮ ಜರುಗಿಸದೆ ಇರುವುದು ಕಂಡುಬಂದಿರುತ್ತದೆ.

11. ಮೇಲೆ ನಮೂದಿಸಿದ ಕಾರಣಗಳಿಂದ ಮತ್ತು ಕಡತದಲ್ಲಿನ ಆಧಾರಗಳಿಂದ, ಗಂಡ್ಲುಪೇಟೆ ತಾಲ್ಲೂಕಿನ ಕೆಲಸೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಇರುವ ಪಿರ್ಯಾದುದಾರರಾದ ಶಿವಬಸವಶೆಟ್ಟಿ ಇವರ ಮನೆ ಸಾಲಿನಲ್ಲಿ ಸಾರ್ವಜನಿಕ ಸ್ಥಳವನ್ನು ಒತ್ತುವರಿ ಮಾಡಿ ಶೌಚಾಲಯ ನಿರ್ಮಿಸಿದ್ದು ಚರಂಡಿ ನಿರ್ಮಿಸುವ ಯೋಜನೆ ಅನುಷ್ಠಾನವಾಗದೆ ಇರುವುದು ಕಂಡುಬಂದಿದ್ದು ಸದರಿ ಸ್ಥಳದಲ್ಲಿ ಪಂಚಾಯಿತಿ ಯೋಜನೆಯಂತೆ ಚರಂಡಿ ನಿರ್ಮಿಸಲು ನಿಯಮಾನುಸಾರ ಅಗತ್ಯ ಕ್ರಮ ಜರುಗಿಸಿ ನ್ಯಾಯೋಚಿತವಾಗಿ ಸಂಬಂಧಪಟ್ಟವರಿಗೆ ಅವಕಾಶ ಕಲ್ಪಿಸಿ ಚರಂಡಿ ನಿರ್ಮಿಸಿ, ಚರಂಡಿ ನಿರ್ಮಿಸಿದ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

12. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

14-1-20

[ನ್ಯಾಯಮೂರ್ತಿ ಬಿ.ಎಸ್. ಪಾಟೀಲ್]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.